ಅಧ್ಯಕ್ಷರು.—ನಿಮ್ಮ ಹಕ್ಕನ್ನು ಪೊಟ್ಟುಕುಗೊಳಿಸಬೇಕೆಂಬುದು ನನ್ನ ಉದ್ದೇಶವಲ್ಲ. ಆದರೆ ವಿಚಾರದ ಗಹನತೆಯನ್ನರಿತು ಸರ್ಕಾರದ ಗಮನಕ್ಕೆ ತರುವುದಕ್ಕಾಗಿ ಈ ನಿಯಮ ಅವಕಾಶವನ್ನು ಮಾಡಿಕೊಂಡಿದ್ದೇವೆ. ಆದರೆ ತಾವು ಏನು ಮಾಡುತ್ತಿದ್ದೀರೆಂದರೆ ನಿಯಮ ೩೫ಳಿರ ದುರುಪಯೋಗ ಆಗುತ್ತಿದೆ ಎಂದು ಹೇಳಿದರೆ ತಾವು ಅನ್ಯತಾ ಭಾವಿಸಬೇಡಿ. ಇದು ಒಂದೇ ಅಲ್ಲ. ಇನ್ನು ಕೆಲವು ನಿಯಮಗಳಿವೆ. ಅವುಗಳ ಮೂಲಕ ಸೂಚನೆಯನ್ನು ಕೊಟ್ಟರೆ ಸರ್ಕಾರದಿಂದ ಉತ್ತರವನ್ನು ಪಡೆಯತಕ್ಕಂಥದಕ್ಕೆ ಅವಕಾಶ ಇದೆ. ನಿಯಮ ೩೫ಳಿರಲ್ಲಿ ಉತ್ತರ ಸುಲಭವಾಗಿ ಸಿಕ್ಕುತ್ತದೆಂದು ಪ್ರಶ್ನೋತ್ತರ ವೇಳೆಯನ್ನು ನಿಲ್ಲಿಸಿಬಿಡೋಣವೆ ? ಹಾಗೂ ನಿಯಮ ೬೮ರ ಕೆಳಗೆ ಚರ್ಚೆಯಾಗ ಬೇಕೆಂದಿರುವುದನ್ನು ನಿಲ್ಲಿಸಿಬಿಡೋಣವೆ ? ನಿಯಮ ೩೫ಳಿರ ವ್ಯಾಪ್ತಿಯನ್ನು ವಿಸ್ತರಿಸುತ್ತಾ ಹೋದರೆ ನಮ್ಮಲ್ಲಿ ಇನ್ನುಳಿದಿರತಕ್ಕ ನಿಯಮಗಳ ಸಂಖ್ಯೆಗಳು ಏನಿವೆ ಅವುಗಳಿಗೆ ಬೆಲೆ ಬಾರದಂತಾಗುತ್ತದೆ. ಇದೊಂದು ವಿಶೇಷವಾದ ವ್ಯವಸ್ಥೆ ದಯವಮಾಡಿ ಇದನ್ನು ತಿಳಿದುಕೊಳ್ಳಬೇಕು. ಈಗ ಏನಾಗಿದೆ ಎಂದರೆ ಮಾನ್ಯ ಸದಸ್ಯರು ಯಾರು ಪ್ರಶ್ನೆಯನ್ನು ಕಳುಹಿಸುತ್ತಿಲ್ಲ. ಗಮನ ಸೆಳೆಯುವ ಸೂಚನೆ ಗಳನ್ನೂ ಕಳುಹಿಸುತ್ತಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದರೆ, ನೀವು ಅದನ್ನು ಲಾಟರಿ ಹಾಕುತ್ತೀರಿ. ನಮ್ಮದು ಬರುವುದೇ ಇಲ್ಲ. ಅದಕ್ಕಾಗಿ ಈ ರೀತಿ ಹೇಳುತ್ತಿದ್ದೇವೆ.

ಶ್ರೀ ವಿ. ಧನಂಜಯ ಕುಮಾರ್.—ಉತ್ತರ ಕಳುಹಿಸಿದರೂ ಅದು ಬರುವುದಿಲ್ಲ ಏನು ಮಾಡುವುದು.

ಅಧ್ಯಕ್ಷರು.—ನಮ್ಮ ಮೇಲೆ ನಾವೇ ನಿಯಂತ್ರಣವನ್ನು ಹಾಕಿಕೊಳ್ಳುವುದು ಒಳ್ಳೆಯದು.

ಶ್ರೀ ವಿ. ಧನಂಜಯ ಕುಮಾರ್.—೩೫ಳಿರ ನಿಯಮ ಏನು ಇದೆ ಇದೊಂದು ರಾಮಬಾಣ ವೆಂದು ನಾವು ತಿಳಿದುಕೊಂಡಿದ್ದೇವೆ. ಅದಕ್ಕೆ ತಾವು ಅನುಮತಿ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ಬೇಗ ಪರಿಹಾರ ಸಿಕ್ಕುತ್ತದೆಂದು ನಾನು ಅಪ್ಪಣೆ ಕೊಡುತ್ತಿದ್ದೇನೆ. ಆದರೆ ಅದು ದುರುಪಯೋಗವಾಗಬಾರದು.

ಶ್ರೀಮತಿ ಚಂದ್ರಪ್ರಭ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ ಖಾತೆಯ ಮಂತ್ರಿಗಳು).—ಮಾನ್ಯ ಸದಸ್ಯರೇಕರು ಏನೊಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಕೆಲವು ಪತ್ರಿಕೆ ಗಳಲ್ಲೂ ಕೂಡ ಇದು ಪ್ರಕಟವಾಗಿದೆ. ನಮ್ಮಲ್ಲಿ ಕೆಲವು ಖಾಸಗಿ ಸಂಸ್ಥೆಯವರು, ಖಾಸಗಿ ಜನಗಳು, ಈ ರೀತಿಯ ವಿದ್ಯಾರ್ಥಿನಿಲಯಗಳನ್ನು ಅಥವಾ ವರ್ಕಿಂಗ್‌ವೂಮನ್ ಹಾಸ್ಟಲ್‌ಗಳನ್ನು ನಡೆಸುತ್ತಿದ್ದಾರೆ ಅದಕ್ಕೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಧನಸಹಾಯ ಕೂಡ ದೊರೆಯುತ್ತದೆ. ನಮ್ಮಿಂದಲೂ ದೊರೆಯುತ್ತದೆ. ಆದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿ ಇದ್ದಾಗ್ಯೂ ಇದುವರೆಗೂ ಯಾರಿಂದರೂ ಬರವಣಿಗೆಯಿಂದಲಾದರೂ, ಅಥವಾ ಸ್ವತಃವಾಗಿಯಾದರೂ ನನಗೆ ದೂರನ್ನು ಕೊಟ್ಟಿಲ್ಲ. ಆದರೆ ಇಷ್ಟೊಂದು ಪ್ರಕೋಪಕ್ಕೆ ಹೋಗಬೇಕಾದರೆ ಇದಕ್ಕೆ ಏನಾದರೊಂದು ಹಿನ್ನೆಲೆ ಇರಲೇಬೇಕು. ಪೋಲೀಸಿನವರು ಮಧ್ಯೆ ಪ್ರವೇಶ ಮಾಡಿ ಕೆಲವಾರು ಕ್ರಮಗಳನ್ನು ಜರುಗಿಸಿದ್ದಾರೆ. ನಮ್ಮ ಮಾನ್ಯ ಸದಸ್ಯರು ಏನೇನು ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತರಿಸಿಕೊಂಡು ಈ ಸದನದಲ್ಲಿ ಮುಂದಿನ ಸೋಮವಾರ ಅಥವಾ ಮಂಗಳವಾರ ಈ ಬಗ್ಗೆ ವಿಚಾರಣೆ ಮಾಡಿ ಒಂದು ಹೇಳಿಕೆಯನ್ನು ಕೊಡುತ್ತೇನೆ. ಮತ್ತೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(iv) ವ್ಯವಸಾಯ ಇಲಾಖೆಯಲ್ಲಿ ವ್ಯವಸಾಯ ಸಹಾಯಕ ಅಧಿಕಾರಿಗಳ ಹುದ್ದೆಯ ಸಂದರ್ಶನದ ಸಮಯದಲ್ಲಿ ಅಂಗವಿಕಲರಿಗೆ ವಿನಾಯಿತಿ

ಶ್ರೀ ಎಸ್. ಜಿ. ರಾಮಲಿಂಗಯ್ಯ.—ಮಾನ್ಯ ಅಧ್ಯಕ್ಷರೆ, ವ್ಯವಸಾಯ ಇಲಾಖೆಯಲ್ಲಿ ವ್ಯವಸಾಯ ಸಹಾಯಕ ಅಧಿಕಾರಿಗಳ ಹುದ್ದೆಗೆ ಕಳೆದ ತಿಂಗಳು ಸಂದರ್ಶನ ನಡೆಯಿತು. ಅಂಗವಿಕಲ ರಿಗೆ ಇಂತಿಷ್ಟು ವಿನಾಯಿತಿ ಇದೆ ಎಂದು ಗೆಜೆಟ್‌ನಲ್ಲಿ ನೋಟಿಫೈ ಮಾಡಿದ್ದರು. ಆದಕ್ಕಾಗಿ ಕೆಲವಾರು ಅಂಗವಿಕಲರು ಅರ್ಜಿಯನ್ನು ಹಾಕಿಕೊಂಡಿದ್ದರು. ಆದರೆ ಇವರೆಲ್ಲರೂ ಸಂದರ್ಶನಕ್ಕೆ ಹೋದಾಗ ಅರ್ಹತೆ ಇಲ್ಲ ''ನಾಟ್ ಎಲಿಜಿಬಲ್'' ಎಂಬುದಾಗಿ ಹೇಳಿ ಹಿಂದಕ್ಕೆ ಕಳುಹಿಸಿದ್ದಾರೆ. ಸಂದರ್ಶನದಲ್ಲಿ ಅವರು ಪಡೆದುಕೊಂಡಿರುವಂತಹ ಮಾರ್ಕ್ಸ್ ಅನ್ನೂ ಕೂಡ ಹಾಕಿಲ್ಲ. ಅರ್ಹತೆ ಇರತಕ್ಕಂತಹವರ

ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಅಂಗವಿಕಲರು ಅರ್ಹರಲ್ಲ ಅಂತ ಈಗ ಹೇಳುವುದಾದರೆ, ಮೊದಲು ನೋಟಿಫೈ ಮಾಡುವಾಗ ಏಕೆ ಹೇಳಲಿಲ್ಲ. ಆ ರೀತಿ ಹೇಳಿದ್ದಿದ್ದರೆ ಇವರ್ಯಾರು ಅರ್ಜಿಯನ್ನೇ ಹಾಕುತ್ತಿರಲಿಲ್ಲ. ರೈತರ ಚಳುವಳಿಯಾದಂತಹ ದಿವಸದ ಹಿಂದೆ ಮುಂದೆ ಸಂದರ್ಶನ ವಾಯಿತು. ಅವರು ವಾಪಸ್ಸು ಊರಿಗೆ ಹೋಗುವುದಕ್ಕೆ ಪಟ್ಟಂತಹ ಪಾಡು ಹೇಳತೀರದು. ಇಂತಹ ಒಂದು ಬೇಜಾವ್ದಾರಿಯುತ ಕೆಲಸ ಸರ್ಕಾರದಿಂದ ನಡೆದಿದೆ. ಇದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ರೇವಣ್ಣ.—ಆದು ವ್ಯವಸಾಯ ಸಹಾಯಕ ಅಧಿಕಾರಿಗಳ ಹುದ್ದೆಯಲ್ಲಿ ಗ್ರಾಮ ಸೇವಕರಿಗೆ ಕರೆದಂತಹ ಸಂದರ್ಶನ ಆದು. ಗ್ರಾಮ ಸೇವಕರು ಅಂದರೆ ಆದು ಎಕ್ಸಿಕ್ಯೂಟೀವ್ ಜಾಬ್, ಹೊಲಗಳಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ. ಸರಿಯಾಗಿ ತಿರುಗಾಡುವುದಕ್ಕೂ ಶಕ್ತಿ ಇಲ್ಲದಂತಹವರು ಆ ದಿವಸ ಸಂದರ್ಶನಕ್ಕೆ ಬಂದಿದ್ದರು. ಆ ಒಂದು ಕಾರಣದಿಂದ ಇವರನ್ನು ಆಯ್ಕೆ ಮಾಡಿಲ್ಲವೆಂದು ನನಗೆ ಬಂದಿರುವ ಪರ್ತಪಾನ.

(v) ಶಿವಮೊಗ್ಗ ಮುನಿಸಿಪಾಲಿಟಿಯವರು ಕಾಲೇಜಿಗೆ ಕಟ್ಟಡವನ್ನು ಕಟ್ಟುವುದ ಕ್ಕೋಸ್ಕರವಾಗಿ ಜಾಗವನ್ನು ಕಾಯ್ದಿರಿಸಿರುವ ಬಗ್ಗೆ

ಶ್ರೀ ಎಂ. ಆನಂದರಾವ್.—ನನ್ನ ಪಕ್ಕದ ಕ್ಷೇತ್ರವಾದ ಭದ್ರಾವತಿಯ ಪ್ರತಿನಿಧಿಯಾದಂತಹ ಶ್ರೀಮಾನ್ ಸಾಲೇರ್ ಸಿದ್ದಪ್ಪನವರ ಕ್ಷಮೆ ಕೋರಿ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವೊಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೂ ಹಾಗೂ ಅವರ ಗಮನಕ್ಕೂ ತರಲಿಚ್ಚಿಸುತ್ತೇನೆ.

೧೦–೩೦ ಎ. ಎಂ.

ಭದ್ರಾವತಿ ನಿಯಂತ್ರಿತ ಮಾರುಕಟ್ಟೆಯು ನಿರ್ಮಾಣಕ್ಕೆ ಸರ್ವೆ ನಂ. ೫೩ರಲ್ಲಿ ೧೨ ಎಕರೆ ಜಮೀನನ್ನು ಪಡೆಯಲಾಗಿತ್ತು. ನಂತರ ಆ ಸ್ಥಳ ಕಟ್ಟಡಕ್ಕೆ ಯೋಗ್ಯವಲ್ಲವೆಂದು ಬೇರೆ ಜಮೀನನ್ನು ಪಡೆಯಲಾಗಿದೆ. ಆ ೧೨ ಎಕರೆ ಜಾಗವನ್ನು ಕಾಲೇಜು ಕಟ್ಟಲು ಕಾಯ್ದಿಡಲಾಗಿದೆ. ಆದರೆ ಅದನ್ನು ಬೇರೆ ಉದ್ದೇಶಕ್ಕೆ ಅಂದರೆ ನಿವೇಶನ ಮಾಡುವ ಹವಣಿಕೆಯಲ್ಲಿರುವುದರಿಂದ ಈ ಬಗ್ಗೆ ವಿದ್ಯಾರ್ಥಿಗಳು ವಿರೋಧ ಮಾಡುತ್ತಿರುವ ಕಾರಣ ಸರ್ಕಾರ ಸದರಿ ಜಾಗವನ್ನು ಕಾಲೇಜು ನಿರ್ಮಾಣಕ್ಕೆ ಮೀಸಲಿಡ ಬೇಕೆಂದು ಒತ್ತಾಯಿಸುತ್ತೇನೆ ಮತ್ತು ಸಾಲೂರು ಸಿದ್ದಪ್ಪನವರು ಇದಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಸದಸ್ಯರು ಹೇಳಿದ ಹಾಗೆ, ಭದ್ರಾವತಿಯಲ್ಲಿ ಎ.ಪಿ.ಎಂ.ಸಿ.ಯವರು ೫ ಎಕರೆ ೩೦ ಗುಂಟೆ ಜಾಗವನ್ನು ೧೯೭೪–೭೫ರಲ್ಲಿ ಖಾಸಗಿ ಯವರಿಂದ ಕೊಂಡುಕೊಂಡಿದ್ದರು. ಅದು ಮಾರುಕಟ್ಟೆ ಕಟ್ಟಲು ಸಾಕಾಗುವುದಿಲ್ಲವೆಂದು ಹೊರಗಡೆ ೨೩ ಎಕರೆ ಜಾಗವನ್ನು ತೆಗೆದುಕೊಂಡಿದ್ದಾರೆ. ಆದರೆ ಎ.ಪಿ.ಎಂ.ಸಿ. ಯ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ಕಟ್ಟಡ ಕಟ್ಟುವುದಕ್ಕೆ ಆಗಿಲ್ಲ. ಅವರಿಗೆ ಅಗತ್ಯವಾಗಿ ಹಣ ಬೇಕಾಗಿದೆ. ಮುನಿಸಿಪಾಲಿಟಿಯವರು ಒಂದು ರೆಸಲ್ಯೂಷನ್ ಪಾಸ್ ಮಾಡಿ ನನ್ನನ್ನು ನೋಡಿದರು. ಅವರು ಆದರಲ್ಲಿ ಏನು ಹೇಳಿದ್ದಾರೆಂದರೆ, ನಮಗೆ ಆ ಜಾಗವನ್ನು ಕೊಡಿ, ಆವರು ೧೯೭೪–೭೫ರಲ್ಲಿ ಏನು ಹಣ ಕೊಟ್ಟು ಕೊಂಡುಕೊಡಿದ್ದಾರೆ ಆ ಹಣವನ್ನು ಕಂತಿನಲ್ಲಿ ಕೊಡುತ್ತೇವೆಂದು. ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಎ.ಪಿ.ಎಂ.ಸಿ.ಯವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದೆ ಇರುವುದರಿಂದ ಅವರು ಆದಕ್ಕೆ ಒಪ್ಪುತ್ತಿಲ್ಲ. ಮಾರುಕಟ್ಟೆಯ ದರವನ್ನು ಕೊಟ್ಟರೆ ಬಿಟ್ಟು ಕೊಡುವುದಕ್ಕೆ ತಯಾರಿದ್ದಾರೆ.

ಅಧ್ಯಕ್ಷರು.—ಶ್ರೀ ಸ್ವಾಮಿರಾವ್ ಅವರು ಏನು ಒಂದು ನೋಟೀಸ್ ಕೊಟ್ಟಿದ್ದಾರೆ ಅದರಲ್ಲಿ ವೈಸ್ ಚಾನ್ಸ್‌ಲರ್ ವಿಚಾರವನ್ನು ಎತ್ತಿದ್ದಾರೆ. ಛ್ಯಾನ್ಸಲರ್ ಗವರ್ನರ್ರೇ ಆಗಿರುವುದರಿಂದ ಅದನ್ನು ಇಲ್ಲಿ ಚರ್ಚೆ ಮಾಡುವುದು ಬೇಡವೆಂದು ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಸ್ವಾಮಿರಾವ್.—ನಾವು ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಅದು ಇಂಡಿವಿಜಿಯುಲ್ ಹೆರಾಸ್‌ಮೆಂಟ್. ಅದರ ಬಗ್ಗೆ ಪೋಲೀಸರು ಕ್ರಮ ತೆಗೆದುಕೊಂಡು ಅರೆಸ್ಟ್ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ಪ್ರಶ್ನೆ ಕಳುಹಿಸಿ. ನೀವು ಈಗ ಕೇಳುತ್ತಿರುವುದು ರೂಲ್ ೫೩ರ ದುರುಪಯೋಗಕ್ಕೆ ನಿದರ್ಶನವಾಗಿದೆ. ನಿಮಗೆ ಏನಾದರೂ ಹೇಳಿದರೆ ಗಲಾಟೆ ಮಾಡಲು ಪ್ರಾರಂಭಿಸುತ್ತೀರಿ.